ಶ್ರೀಮಹದೇಶ್ವರ ದರ್ಶನಮ್



ಶ್ರೀ ಯಲ್ಲ ಮಹದೇಶ್ವರ ಸ್ವಾಮಿ ದೇವಸ್ಥಾನ.
ಶ್ರೀ ಮಹದೇಶ್ವರ ಬೆಟ್ಟ. ಕೊಳ್ಳೇಗಾಲ. ತಾಲ್ಲೂಕು. ಮೈಸೂರು. ಜಿಲ್ಲೆ.

ಡಿಸೆಂಬರ್ 1994, ಸಂಪುಟ–10
ವಿಶೇಷ ಧಾರ್ಮಿಕ ಪತ್ರಿಕೆ
ಸಂಚಿಕೆ–೧೨ ರಿಜಿಸ್ಟರ್ ನಂ ಕೆ.ಆರ್.ಎನ್.ಎನ್. 147

ಶ್ರೀ ಮಹದೇಶ್ವರ ದರ್ಶನಮ್

ಸಂಪಾದಕ ಮಂಡಳಿ
ಪ್ರಧಾನ ಸಂಪಾದಕರು
ಶ್ರೀ ಡಿ. ಪ್ರಭಾಕರ್,
ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ಮಹದೇಶ್ವರಬೆಟ್ಟ

ಕಾರ್ಯಕಾರಿ ಸಂಪಾದಕರು
ಶ್ರೀ ಸಿ. ನಾಗರಾಜು
ಮುಖ್ಯೋಪಾಧ್ಯಾಯರು,
ಮಹದೇಶ್ವರ ಪ್ರೌಢಶಾಲೆ, ಮಹದೇಶ್ವರಬೆಟ್ಟ

ಮುಖಪುಟ
ಪವಾಡ ಪುರುಷ ಶ್ರೀ ಮಲೆಮಹದೇಶ್ವರರು

* ಪ್ರಧಾನ ಸಂಪಾದಕರು *
ಮತ್ತು ಪ್ರಕಾಶಕರು
ಕಾರ್ಯ ನಿರ್ವಾಹಕ ಅಧಿಕಾರಿಗಳು
ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ,
ಮಹದೇಶ್ವರಬೆಟ್ಟ.

* ಮುದ್ರಕರು *
ಶ್ರೀ ಹೆಚ್. ಸಿ. ಬಸವಣ್ಣ
ಜೆ.ಎಸ್.ಎಸ್. ಮುದ್ರಣಾಲಯ, ಮೈಸೂರು
ದೂರವಾಣಿ ಸಂಖ್ಯೆ : 27582

ಗೌರವ ಸಲಹಾ ಸಮಿತಿ ಸದಸ್ಯರು
ಮತ್ತು ಧರ್ಮದರ್ಶಿಗಳು
ಪ್ರಣವ ಶ್ರೀ ಪಟ್ಟದ ಮಹದೇವಸ್ವಾಮಿಗಳು
ಶ್ರೀ ಸಾಲೂರು ಮಠ, ಮಹದೇಶ್ವರಬೆಟ್ಟ

ಶ್ರೀ ನಂ. ಸಿದ್ದಪ್ಪ, ಮೈಸೂರು
ಶ್ರೀ ಹೆಚ್. ಗಂಗಾಧರನ್, ಮೈಸೂರು
ಶ್ರೀ ಡಿ.ಸಿ. ಚನ್ನೇಗೌಡ, ಬೆಂಗಳೂರು.
ಶ್ರೀ ಕೆ.ಪಿ. ಸಿದ್ದಲಿಂಗಪ್ಪ, ಬೆಂಗಳೂರು
ಶ್ರೀ ಸಿ. ದೊಡ್ಡಮಾದಯ್ಯ, ಮೈಸೂರು
ಶ್ರೀ ಪಲಗ ತಂಬಡಿ, ಮಹದೇಶ್ವರಬೆಟ್ಟ
ಶ್ರೀ ಸಾಹುಕಾರ್ ಟಿ. ಪ್ರೇಮನಾಥ್, ಮೈಸೂರು
ಶ್ರೀ ಪಳನಿಯಪ್ಪ ಗೌಂಡರ್, ಮೈಸೂರು

* ಸದಸ್ಯರು *
ಶ್ರೀ ಸಿ. ಬಿ. ಪಾಟೀಲ್
ಶ್ರೀ ಎಂ ಬಿ. ಮಹದೇವಪ್ಪ
ಶ್ರೀ ಬಿ. ಮಹದೇವಪ್ಪ
ಶ್ರೀ ಕೆ. ವಿಜಯಕುಮಾರ್
ಶ್ರೀ ದತ್ತಾತ್ರೇಯ ಗೋಪಾಲಕೃಷ್ಣ ಭಟ್
ಶ್ರೀ ಚನ್ನಬಸಪ್ಪ

ಚಂದಾದರ (ಅಂಚೆ ವೆಚ್ಚ ಸೇರಿ)

ಬಿಡಿಪತ್ರಿಕೆ ಬೆಲೆ ರೂ.	5–00
ವಾರ್ಷಿಕ ಚಂದಾ ರೂ.	50–00
ಆಜೀವ ಸದಸ್ಯತ್ವ ರೂ.	500–00
ಪೋಷಕರು ರೂ.	1001–00
ಮಹಾಪೋಷಕರು	5001–00

ಸಂಪಾದಕೀಯ

"ಹಳೆಯೆ ನೆನಪು ಹೊಸ ಚೈತನ್ಯ" ಮಾನವ ಜೀವನದ ಸೊಬಗು. 1994ರ ವರ್ಷದಲ್ಲಿ ನಡೆದ ಕೆಲವು ಘಟನೆಗಳ ನೆನಪು ಅವಶ್ಯಕ. ಈ ವರ್ಷದಲ್ಲಿ ವ್ಯಕ್ತಿ ವಿಶೇಷವಾಗಿ ಬಂದವರು ಚುನಾವಣಾ ಆಯೋಗದ "ಶೇಷನ್"ರವರು, ಚುನಾವಣೆಯ ಕಾನೂನುಗಳನ್ನು ಜಾರಿಗೊಳಿಸಿ ಚುನಾವಣೆಯಲ್ಲಿನ ಲೋಪದೋಷಗಳನ್ನು ಸರಿಪಡಿಸುವ ಅವರ ಪ್ರಯತ್ನ ಜನಸಾಮಾನ್ಯರಿಂದ ಮೆಚ್ಚುಗೆ ಗಳಿಸಿದೆ. ಕರ್ನಾಟಕ ರಾಜ್ಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನಗಳಿಸಿದೆ. ಹೊಸ ಸರ್ಕಾರ ಶ್ರೀ ಹೆಚ್.ಡಿ. ದೇವೇಗೌಡರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದೆ. ಹೊಸ ಪಕ್ಷ ಹೊಸ ಮಂತ್ರಿಮಂಡಲದ ರಚನೆ ಇವು ಈ ವರ್ಷದ ಮತ್ತೊಂದು ವಿಶೇಷ. ಅದಕ್ಕಾಗಿ ಕನ್ನಡದ ಜನತೆಗೂ ಮುಖ್ಯಮಂತ್ರಿ ಶ್ರೀ ದೇವೇಗೌಡರಿಗೂ ಅವರ ಮಂತ್ರಿಮಂಡಲದ ಸದಸ್ಯರಿಗೂ ನಮ್ಮ 'ಪತ್ರಿಕಾ ಬಳಗ ಅಭಿನಂದಿಸುತ್ತದೆ'. "ಈ ನಾಡಿನ ಸಂಸ್ಕೃತಿ, ಕಲೆ, ಸಾಹಿತ್ಯ, ಧರ್ಮ ಬೆಳಗಿಸುವಂತ ಕಾರ್ಯಕ್ರಮ ಹಮ್ಮಿಕೊಳ್ಳುವಂತಾಗಲಿ. ಜನಸಾಮಾನ್ಯರಿಗೆ ಮೆಚ್ಚುಗೆ ಸರ್ಕಾರವಾಗಲಿ ಎಂದು ಹಾರೈಸುತ್ತೇವೆ".

ಈ ವರ್ಷ ನಮ್ಮನ್ನಗಲಿದ ಕುವೆಂಪು ಕನ್ನಡ ರತ್ನ ದಿಗಂತದಲ್ಲಿ ಮರೆಯಾಗಿದ್ದಾರೆ. ಸಾಹಿತ್ಯ ಲೋಕದಲ್ಲಿ ಶಾಶ್ವತ ನೆಲೆಯಾಗಿದ್ದಾರೆ. ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿಯ ಕಿರೀಟ. ಡಾ। ಅನಂತಮೂರ್ತಿಯವರು ಕನ್ನಡದ ಈ ಹೆಮ್ಮೆಯ ಕುವರರಾಗಿದ್ದಾರೆ. ಅವರಿಗೆ ಈ ವರ್ಷ ಸಂದ ಜ್ಞಾನಪೀಠ ಪ್ರಶಸ್ತಿ ಕನ್ನಡಕ್ಕೆ ದೊರೆತ ಗೌರವ. ಇಂತಹ ಇನ್ನೂ ಅನೇಕ ಗಣ್ಯ ಸಾಹಿತ್ಯ ಲೋಕದ ದಿಗ್ಗಜಗಳು ಕನ್ನಡದಲ್ಲಿದ್ದಾರೆ ಎಂಬುದೊಂದು ಹೆಮ್ಮೆಯ ವಿಷಯ.

ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಈ ವರ್ಷ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿತ್ತು. ಕೊಳ್ಳೇಗಾಲದಲ್ಲಿ ನಿರ್ಮಿಸಿರುವ ಕಲ್ಯಾಣ ಮಂದಿರ; ಧರ್ಮದರ್ಶಿ ಮಂಡಲಿಯವರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ಧರ್ಮಸ್ಥಳ ಕುಕ್ಕೆ ಸುಬ್ರಮಣ್ಯ, ಉಡುಪಿ ಮುಂತಾದ ಸ್ಥಳಗಳಿಗೆ ಭೇಟಿ ನೀಡಿ ಇಲ್ಲಿ ದಾಸೋಹ ಭವನದ ನಿರ್ಮಾಣದ ಬಗ್ಗೆ ಕೈಗೊಂಡ ಕಾರ್ಯಕ್ರಮಗಳು. ಇವೆಲ್ಲಕ್ಕಿಂತ ಹೆಚ್ಚಾಗಿ "ರಾಜಗೋಪುರ ನಿರ್ಮಾಣ" ಕಾರ್ಯ ಬಹಳ ಉತ್ತಮವಾದಂತಹ ಕಾರ್ಯಕ್ರಮಗಳಾಗಿವೆ. ಕಲೆ, ಸಂಸ್ಕೃತಿ, ಜನಪದ ಸಾಹಿತ್ಯಕ್ಕೂ ಹೆಚ್ಚಿನ ಆಸಕ್ತಿ ವಹಿಸಿ ಈ ವರ್ಷ ಅನೇಕ ನಾಟಕಗಳು, ಜನಪದ ಮೇಳ, ಹರಿಕಥೆಗಳ ಕಾರ್ಯಕ್ರಮಗಳು ನಡೆದಿವೆ. ಶ್ರೀ ಮಹದೇಶ್ವರರ ಬಗ್ಗೆ ದೂರದರ್ಶನದಲ್ಲಿ ಪ್ರಸಾರವಾಗಬೇಕಾಗಿರುವ ಕಾರ್ಯಕ್ರಮ ವಿಳಂಬವಾಗಿದೆ. ಅದರ ಬಗ್ಗೆಯೂ ಆಸಕ್ತಿ ವಹಿಸಲಾಗಿದೆ. ಜನಸಾಮಾನ್ಯರಿಗೆ ಉಪಯುಕ್ತವಾದ 'ಡಿ' ಮಾದರಿ ಕುಠೀರಗಳ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ. "ಶ್ರೀ ಮಹದೇಶ್ವರ ದರ್ಶನಮ್" ಪತ್ರಿಕೆ ಪ್ರತಿಯೊಬ್ಬ ಭಕ್ತರಿಗೂ ತಲುಪುವಂತೆ ಆಗಬೇಕು. ಅದಕ್ಕಾಗಿ ಈಗಾಗಲೇ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಡಿ. ಪ್ರಭಾಕರ್‌ರವರು ಹೆಚ್ಚಿನ ಪುದುವಟ್ಟು ಇಟ್ಟಿರುವ ಎಲ್ಲಾ ಮಹನಿಯರಿಗೂ ಪತ್ರಿಕೆ ತಲುಪುವಂತೆ ವ್ಯವಸ್ಥೆ ಮಾಡಿದ್ದಾರೆ. ಭಕ್ತರು ಈ ಪತ್ರಿಕೆಗೆ ಚಂದಾದಾರರಾಗಿ ದೇವಸ್ಥಾನದಲ್ಲಿ ನಡೆಯುವ ಕಾರ್ಯಕ್ರಮಗಳನ್ನು ತಿಳಿಯಬಹುದಾಗಿದೆ. ಪ್ರತಿ ತಿಂಗಳೂ ಹೊಸ ಹೊಸ ವಿಚಾರಗಳೊಡನೆ ಧರ್ಮ ಸೀಮೆಯಲ್ಲಿ ನಿಮ್ಮನ್ನು ಕೊಂಡೊಯ್ಯುವ "ಮಾಸ ಪತ್ರಿಕೆ" ಇದಾಗಲೆಂದು ತಾವೆಲ್ಲಾ ಹಾರೈಸಬೇಕೆಂದು ಪ್ರೋತ್ಸಾಹ ನೀಡಬೇಕೆಂದು ಕಳಕಳಿಯಿಂದ ಬೇಡುತ್ತೇನೆ.

ಮುಂದಿನ ವರ್ಷದಲ್ಲಿ ಧಾರ್ಮಿಕ ವಿಷಯಗಳನ್ನೊಳಗೊಂಡು ಉತ್ತಮ ಲೇಖನಗಳು ಬರುವಂತಾಗಲು ಸಾಹಿತಿಗಳೂ, ದೈವಭಕ್ತ ಸಮುದಾಯ ಹೆಚ್ಚಿನ ಸಹಕಾರ ನೀಡುವರೆಂದು ನಂಬಿದ್ದೇನೆ. ಈ ಪತ್ರಿಕೆಯ ಸಂಪಾದಕ ಮಂಡಲಿಗೂ ಹಾಗೂ ಇಲ್ಲಿ ಪ್ರಕಟಗೊಂಡ ಲೇಖನಗಳಿಗೂ ಯಾವುದೇ ಸಂಭಾವನೆ ಇರುವುದಿಲ್ಲ. ಇದೊಂದು ದೇವರ ಕಾರ್ಯ. ಈ ಪತ್ರಿಕೆ ಈ ತಿಂಗಳಿಗೆ 10 ವರ್ಷಗಳನ್ನು ಪೂರೈಸಿದೆ. ದೇವಸ್ಥಾನ ಈ ಸಾಲಿನಲ್ಲಿ ಮಾತ್ರ ತನ್ನ ಮೊದಲ ವರ್ಷದ ಪ್ರಕಟಣೆಯನ್ನು ಕೈಗೊಂಡಿದೆ. ಶ್ರೀ ಹೆಚ್.ಗಂಗಾಧರನ್ ಅವರು ಈ ಪತ್ರಿಕೆಗಾಗಿ ಬಹಳ ಶ್ರಮಿಸಿದ್ದಾರೆ. ಈಗಲೂ ಚಿಂತನ ಗಂಗೋತ್ರಿ, ಚಿಂತನ ಚೈತನ್ಯಗಳಂತಹ ಲೇಖನಗಳನ್ನು ಮುಂದುವರೆಸಿ ಮಾರ್ಗದರ್ಶನ ನೀಡುತ್ತಿದ್ದಾರೆ. ಧರ್ಮದರ್ಶಿ ಮಂಡಲಿಯ ಅಧ್ಯಕ್ಷರಾದ ಶ್ರೀ ನಂ. ಸಿದ್ದಪ್ಪನವರೂ ಹಾಗೂ ಧರ್ಮದರ್ಶಿ ಮಂಡಲಿಯವರೂ ಸಹ ಈ ಪತ್ರಿಕೆ ಬೆಳೆಯಲು ಬಹಳ ಸಹಕಾರ ನೀಡುತ್ತಿದ್ದಾರೆ. ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಡಿ. ಪ್ರಭಾಕರ್‌ರವರು ಈ ಪತ್ರಿಕೆ ಉತ್ತಮಗೊಳ್ಳಬೇಕೆಂದು ಬಹಳ ಬಯಕೆ ಹೊಂದಿದ್ದಾರೆ.

"ಹೊಸ ವರ್ಷ ಹೊಸ ಬಯಕೆಗಳನ್ನು ಪೂರೈಸುವ ಹರ್ಷದ ವರ್ಷವಾಗಲೆಂದು ಹಾರೈಸುತ್ತೇನೆ".

–ಸಿ. ನಾಗರಾಜು
ಕಾರ್ಯಕಾರಿ ಸಂಪಾದಕರು

ಮಹದೇಶ್ವರ ಚರಿತ್ರೆಯಲ್ಲಿ ಬೇಡಗಂಪಣದ ಜನಾಂಗ

–ಹಳೆಯೂರು ಎಂ. ಮಾದಯ್ಯ ಶಿಕ್ಷಕ

ಬೇಡಗಂಪಣದ ಜನಾಂಗದ ಬಗ್ಗೆ ಬೆಳಕು ಚೆಲ್ಲುವ ಆಧಾರಗಳಲ್ಲಿ ಪ್ರಮುಖವಾದ ಆಧಾರಗಳೆಂದರೆ

1) ಹೊಯ್ಸಳ ಬಲ್ಲಾಳ ದೇವರ ತಾಮ್ರ ಶಾಸನ 2) ಬಹದ್ದೂರ್ ಹೈದರಾಲಿ ಖಾನನ ತಾಮ್ರಶಾಸನ.

ಹೊಯ್ಸಳ ಬಲ್ಲಾಳ ದೇವರ ತಾಮ್ರ ಶಾಸನ

ಶ್ರೀ ಮತ್ಸಚ್ಚಿದಾನಂದ ನಿತ್ಯ ಪರಿಪೂರ್ಣ ಅವಿರಸಜ್ಞಾನಾನಂದ ಪರಂಜ್ಯೋತಿ ಸ್ವರೂಪ ಜಗತ್ ವಿಸ್ತಾರ ಮೂಲಸ್ತಂಜಾಯಮಾನ ಚರಾಚರ ಜಗಜ್ಜಾಲ ಜನ್ಮ ಕಾರಣೀಭೂತ ಶ್ರುತಿಸ್ಸರೇ ಪುರಾಣದ ಮೇರು ಹಾಸನ ಅನಾದಿಗುಣ ಮರುಳಾರ್ಯ ವಂಶ ಪರಂಪರಾಂಗತ ಪರಿವಿಡಿ ತ್ರಾಜಗುರು ಅಪ್ಪಣಾರ್ಯ ನಿಜಗರ್ಭ ಸಂಜನಿತ ವೇದ ವೇದಾಂತೋಪನಿಷತ್ಸಾಹೋರಿತ ಮಹನಿಜ ಪಟ್ಟ ಮೂರ್ತಿಯಾಗಿ ಕಲ್ಲು ಗೂಳಿಯಂ ನುಡಿಸಿ ಪಂದಪಡೆಯ ನೆಂಬುವನ ದಾಸೋಹ ಬಲ್ಲವಗೆ ವ್ರತಕಡಿಮೆಯಾಗಿ, ಕುಂಬೋದಕ ತರಿಸಿ ಉಣ ಬಡಿಸಿ ಕುಲಾಂತರಮಿಗೆ ಕೂಟಪಾಲುಗಳಂ ವಿಂಗಡಿಸಿ ಮುನ್ನೂರ ಮುವತ್ತೈದು ಪಂಗಡನಾಗೆ ಮಾಡಿ ತತ್ತವರಿಗೆ ಆರಾಧ್ಯಾಕರಾಗಿಯೂ ಗೋವಿನಕೆರೆ ಸಾಸರಾಯನೆಂಬುವಗೆ ಲಿಂಗದಾರಣೆಯಂ ಮಾಡಿ ಪಟ್ಟಗಾರ ರಾಯಣ್ಣನಾಯ್ಕನಿಗೆ ಮಲೆನಾಡಿಗೆ ಪಟ್ಟವಂಕಟ್ಟಿ, ಕುಲಬಂದಕ್ಕೆ ಇಪ್ಪತ್ತೇಳು ಕ್ರಯ ಪಣದಂತೆ ಯಲ್ಲರೊಳು ಕಟ್ಟು ಕಾಣಿಕೆಗಳಂ ಪಡೆದು ಪರಿಪತ್ತಿ ದೇಶಕ್ಕೆ ಪ್ರಯಾಣವಂ ಮಾಡಿ ಸರ್ಪದ್ವಷ್ಟನಾದ ರಾಜನ ಮಗನಂ ಬದುಕಿಸಿ ವಾದದಲ್ಲಿ ಗೆಲಿದು ನಾಮವನ್ನು ತೆಗೆಸಿ ಬಸ್ಮವಂ ಇಡಿಸಿ ಲಿಂಗಧಾರಣೆಯಂ ಮಾಡಿ ತುಳುವದೇಶಕ್ಕೆ ಬಂದು ತುಳು ಕನ್ಯರಿಗೆ ಮಹಿಮೆಯಂ ತೋರಿ ಶತಪವಾಡಗಳ ಮಹಾನೀಯರೆಂದು ಬಿರುದಂ ಪಡೆದ ಶ್ರೀ ಮದ್ಗೋಸಲಾರ್ಯ ವರ್ಯಸ್ವಾಮಿ ಸನ್ನಿದಾನ ಸಂಕಾಶೆ. ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವಿವಲ್ಲಭ ಶ್ರೀವಿಜಯಾಭುದಯ ಶಾಲಿವಾಹನ ಶಕ ವರ್ಷಗಳು 1246 ನೆಯ ತಾರಣ ಸಂವಸ್ತರದ ಮಾಘ ಶುದ್ಧ ತದಿಗೆಯಲ್ಲಿ ದಕ್ಷಿಣ ದೇಶ ವಿಜಯ ಯಾತ್ರೆಯಲ್ಲಿ ಬರೆಸಿಕೊಟ್ಟ ತಾಮ್ರ ಶಾಸನ ಕ್ರಮವೆಂತೆಂದೊಡೆ.

1) ಹಿರಿ ಮಡಿವಾಳದ ಶಿವಲಂಕಾರೇಶ್ವರರಿಗೆ ಚಂದ್ರಣಿ ಮಠದವರು

2) ಶ್ರೀ ಮಹದೇಶ್ವರರಿಗೆ ಕಂಚಿ ತೆಲುಗಾಣಮಠ

3) ಪಂದೇಶ್ವರರಿಗೆ ಶ್ರೀ ವಾಣಿಜ್ಯ ಪುರಿಮಠ

4) ಶ್ರೀ ಸಿದ್ದೇಶ್ವರರಿಗೆ ಕೆಂಬಲ್ಲೂ ಮಠ

5) ಬ್ರಂಹ್ಮೇಶ್ವರರಿಗೆ ಮಹಲಿಂಗಮಠವೆಂತಲೂ ಈ ಪಂಚೈದು ಲಿಂಗಗಳಿಗೆ ಈ ಮಠಗಳೆಂದು ವಿಧಿಸಿ, ತತ್ತ ದೇವಸ್ಥಾನಕ್ಕೆ ಸೇರಿದ ತಂಬಡಿಗಳು ಶಿಷ್ಯರು ಬೇಡಕಂಪಣಗಳಿಗೆ ತತ್ತ ಮಠಾಧಿಪತಿಗಳೇ ಲಿಂಗಧಾರಣ ತೀರ್ಥ ಪ್ರಸಾದಗಳಂ ಕೊಟ್ಟು, ಅವರಿಂ ಕಟ್ಟು ಕಾಣಿಕೆಗಳಂ ತೆಗೆದು ಆ ದೇವಾಲಯಂಗಳಲಿ ನಡೆಯುವ ಕಾರ್ಯಗಳಂ ನಡೆಸತಕ್ಕದೆಂದು ನೇಮಿಸಿರುತ್ತೇವೆ.

ಶ್ರೀ ಮಹದೇಶ್ವರ ಸ್ವಾಮಿಯು ಕತ್ತಲೆ ರಾಜ್ಯದೊಳು ಇದ್ದು ಕನ್ಯಾಳ ದೇಶಕ್ಕೆ ಬಂದು ಸಮಸ್ತ ದೇವತೆಗಳು ಶ್ರವಣನಲ್ಲಿ ಸೇರಿರುವುದಂ ನೋಡಿ ಅವನಂ ಸಂಹಾರ ಮಾಡಿ. ಪ್ರಭುಲಿಂಗಾರಾಧ್ಯರಿಂದ ಲಿಂಗ ಧಾರಣೆಯಂ ಮಾಡಿಸಿಕೊಂಡು ವಜ್ರಮಲೆಯಲ್ಲಿ ನೆಲೆಗೊಂಡು ಆಲಂಬಾಡಿ ಜುಂಜೇಗೌಡನಿಂದ ಒಂದು ಅಂಕಣ ದೇವಾಲಯವಂ ಕಟ್ಟಿಸಿಕೊಂಡು ಭೂಸುರನೆಂಬ ಬೇಡರಕನ್ನಯ್ಯನಿಂದ ಪೂಜಿಸಿಕೊಂಡು ಬೇಡರ ಕನ್ನಯ್ಯನ ದೃಡಕ್ಕೆ ಮೆಚ್ಚಿ ಮೋಕ್ಷವಂ ಕೊಟ್ಟು, ಕುನ್ನಪ್ಪ ನಾಗರ ಸೀಮೆಯಲ್ಲಿದ್ದ ಬೇಡರ ಕಂಪಣರಾಯಣ್ಣ ನಾಯಕನ ಮನೆಯಲ್ಲಿ, ದುಣಕ್ಕೆ ಕೊಂಗದೊರೆಯು ಹೆಣ್ಣು ಕೇಳಿದ್ದರಿಂದ, ಅವರು ತಲೆ ತಪ್ಪಿಸಿಕೊಂಡು ಹೋಗುತ್ತಾ ಬರುವ ದಾರಿಯಲ್ಲಿ ತುಂಗಭದ್ರ ನದಿಯು ಅಡ್ಡಲಾಗಿದ್ದರಿಂದ ದಾಟಲು ಸಾಧ್ಯವಾಗದೆ ಪಾರ್ವತಿ ಅಂಶಳಾದ ಭದ್ರಕಾಳಿ ಅಮ್ಮನವರಂಭಜಿಸಲು ಆ ದೇವಿಯು ಪ್ರತ್ಯಕ್ಷಳಾಗಿ

ಇವರ ಮನೋಭೀಷ್ಯವಂ ನೆರವೇರಿ ನದಿಯಂ ದಾರಿ ಬಿಡಿಸಿ ಹೊರಗೆ ಬಂದು ಇಂತಪ್ಪರ ಮಕ್ಕಳಾದರೆ ಭದ್ರ, ಬದ್ರಿಯೆಂಬ ಹೆಸರು ಕೊಡುತ್ತೇವೆ ಎಂದು ಹೇಳಿ ನೇರಳೆ ಕೆರೆಯಲ್ಲಿ ಸ್ಥಳವಾಗಿದ್ದರು. ಮೇಲಿನ ಪಂಚಮಠದ ಸ್ವಾಮಿಗಳು ಬಂದು ಬೇಡಗಂಪಣಕ್ಕೆ ಲಿಂಗಧಾರಣೆಯಂ ಮಾಡಿ ರಾಯಣ್ಣ ನಾಯ್ಕರಿಗೆ ವೋಕುಳಿ ಸೇವೆಗೆ ಕರ್ತನ ಮಾಡಿ ಶ್ರೀ ಮಹದೇಶ್ವರನು ಉಪ್ಪಲಿಗೆಪಟ್ಟಿಯ ದೃಡಕ್ಕೆ ಮೆಚ್ಚಿ ಗುಡ್ಡನಮಾಡಿ ಎಣ್ಣೆ ಮಜ್ಜನ ಸೇವೆಗೆ ಕರ್ತನ ಮಾಡಿ ಭಕ್ತರುಗಳಿಂ ದೇವಾಲಯುಮಂ ವಿಸ್ತರಿಸಿ ಇದಕ್ಕೆ ಪೂಜಾಕರ್ತರು ಅನ್ನಸಾಲಮ್ಮನ ವಂಶಸ್ಥರಾದ ಕೆಂಪಮಾದತಂಬಡಿ, ಕಾಳಮಾದತಂಬಡಿ, ಬೋಳಮಾದತಂಬಡಿ ಸಂತತಿಯವರಾದ ಕಾಡುವೀರತಂಬಡಿ ಮಕ್ಕಳು ಪೂಜ ವಿರುದ್ಧಮಂ ಮಾಡಿಕೊಂಡು ವ್ಯಾಜ್ಯಕ್ಕೆ ಬರಲು ಇದಕ್ಕೆ ಮೊದಲಾಳಿಯಾದವನು ಮೊಣ್ಣೆಪಾಲಿನವರ ಶಿವಾಗದ ಸೇವೆಗೆ ನೇಮಿಸೆ ಹುಡುಗರು ಪೂಜಾಕರ್ತರೆಂದು ಇವರು ಉತ್ತ. ಭೂಮಿಗೆ ತೆರಿಗೆ ಇಲ್ಲವೆಂದು ಮಾಡಿ ಪಟಗಾರ ರಾಯಣ್ಣ ನಾಯಕನಿಗೆ ಬಿಳಿ ಛತ್ರಿ, ಪಂಚೆ, ವಂಟಿ, ತೋಟಬಳೆ ಶಾಲುನಾಮೆ ಸಹಕೊಟ್ಟು, ಈ ಕಂಪಣಕ್ಕೆ ಕರ್ತನೆಂದು ನಿನ್ನಂ ತದ್ವಂಶಪರಂಪರೆಯಾಗಿ ನಡೆಸಿಕೊಂಡು ಬರತಕ್ಕೆಂದು ನಿಯಮಿಸಿ ಪಟಗಾರ ರಾಯಣ್ಣ ನಾಯಕರ ವಂಶದವರು, ಪಂದೇಶ್ವರ ತಂಬಡಿಗಳು ಮತ್ತು ಶಿಷ್ಯರುಗಳು ಹಿಂಡಿರಾಮನೆಗುಂಪು ಬೆಳೆಕೂಟ, ದೊಣ್ಣೆಕೂಟ, ಗುಪರಿನ ಕೂಟ ಮಂದೆ ಗುದ್ದಲಿ ಪಾಲಿನವರು, ಕೆರಣಿ ಪಾಲಿನವರು, ಶಿವಲಂಕಾರೇಶ್ವರನ ವಕ್ಕಲಿನವರು ಈ ಪಂಚೈದು ದೇವಸ್ಥಾನದ ಮೇಲು ವಿಚಾರದ ಅವಕಾಶವನ್ನು ಅಧಿಕಾರವನ್ನು ಶ್ರೀ ಪಂಚೈದು ಮಠಾಧಿಪತಿಗಳಿಗೆ ಬಿಟ್ಟು ಮಹದೇಶ್ವರ ಬೆಟ್ಟದ ಉರಿಗದ್ದಿಗೆಯೆಂಬ ವಿರಕ್ತ ಕಟ್ಟೆಯಲ್ಲಿ ಐದನೇ ಒಂದು ಭಾಗ ಕಾಣಿಕೆ ಕೊಡುವುದಲ್ಲದೆ ರಾಯನಹಳ್ಳಿ ಬಸವನಪುರವೆಂಬ ಗ್ರಾಮಗಳಂ ಬಿಟ್ಟು ಆ ಗ್ರಾಮದ ಕಾಡಾರಂಬ, ನೀರಾರಂಬ, ಗೊಪ್ಪಲಪೊಂಮೆಸುಂಕ, ದೇವಾದಾಯ, ಬ್ರಂಹಾದಾಯ, ನೆಟ್ಟಕಲ್ಲು ಬಿಟ್ಟಬಸವ ಮೊದಲಾದವುಗಳನ್ನು ಈ ಮಠಕ್ಕೆ ವರತುಪಡಿಸಿ ಅವೃತಪಡಿ ದೀಪಾರಾಧನೆ ಕಾರ್ಯಂಗಳಿಗಾಗಿ ಕೊಡುವುದಲ್ಲದೆ ನಿಮ್ಮ ತದ್ವಂಶ ಪರಂಪರೆಯಾಗಿ ಆಚಂದ್ರಾರ್ಕವಾಗಿ ನಡೆಸಿಕೊಂಡು ಬರತಕ್ಕದೆಂದು ಬರೆಸಿಕೊಟ್ಟ ತಾಮ್ರಶಾಸನ ಇದಕ್ಕೆ ತಪ್ಪಿದರೆ ಗಂಗೆಯ ತಡಿಯಲ್ಲಿ ಸಹಸ್ರ ತಲೆಯಂ ಕೊಂದ ಪಾಪಕ್ಕೆ ಹೋಹರು ಸ್ವದತ್ತಾಂ ಪರದತ್ತಾಯೋಗ ವಸುಂದರಾಂಷಷ್ಯರ್ಷ ಸಹಸ್ರಾಣಿ ವಿಷ್ಟಾಯಂ ಜಾಯತೆ ಕ್ರಮ.

॥ ಮಂಗಳ ಮಹಾ ॥ ಶ್ರೀ ॥ ಶ್ರೀ ಬಲ್ಲಾಳನಾಥ

ಬಹದ್ದೂರ್ ಹೈದರಾಲಿ ಖಾನನ ತಾಮ್ರ ಶಾಸನ

ಶ್ರೀ ಮಹಾದೇವರಾದ ಮಾದೇಶ್ವರಸ್ವಾಮಿ, ಸಿದ್ದೇಶ್ವರ ಸ್ವಾಮಿ, ಬ್ರಹ್ಮೇಶ್ವರ, ಶಿವಲಂಕಾರೇಶ್ವರ, ಹಿರಿಮಡಿವಾಳಸ್ವಾಮಿ ಪಂಚಮಠಕ್ಕೆ ಕರ್ತರಾದ ಗುರುವೇನಮಃ

ಶಾಲಿವಾಹನ ಶಾಕಾಬ್ದ 1698 ದುರ್ಮಿಖಿಸಂ, ಶ್ರಾವಣ 3ರಲ್ಲೂ ಶ್ರೀ ಮಹದೇಶ್ವರಸ್ವಾಮಿ ದೇವರ ಸನ್ನಿಧಿಗೆ ಶ್ರೀರಂಗಪಟ್ಟಣಕ್ಕೆ ಅಧಿಪತಿಯಾದಂತ ಬಹದ್ದೂರು ಸಾಹೇಬರವರು ಶ್ರೀ ಮಹಾಜಗದ್ಗುರುವಾದ ಶ್ರೀ ಮಾದೇಶ್ವರಸ್ವಾಮಿ ತಂಬಡಿಗಳು ಅನ್ನಸಾಲಮ್ಮನ ವಂಶಸ್ಥರಾದ ಕೆಂಪಮಾದವಡೆಯರು ಕಾಳ ಮಾದವಡೆಯರು, ಬೋಳಮಾದವಡೆಯರು ಸಂತತಿಯಾದ ಕಾಡವೀರತಂಬಡಿ ಮಕ್ಕಳಿಗೆ ಬರೆಸಿ ಕೊಟ್ಟ ತಾಮ್ರದ ಶಾಸನದ್ರ ಕ್ರಮವೇನೆಂದರೆ ಯಾ ಮಾದೇಶ್ವರಸ್ವಾಮಿ ಕರ್ತರಲ್ಲಿ ರಾಜ್ಯದ ರಿಪು ಕೊಂಕನಲಾಳಕ ದೇಶಕ್ಕೆ ಬಂದು ಶ್ರವಣನಲ್ಲಿ ಸಮಸ್ತ ದೇವರುಗಳೆಲ್ಲಾ ಸೆರೆಸಿಕ್ಕಿಯಿದ್ದುದು ನೋಡಿ ಆ ಶ್ರವಣ ಸಂಹಾರಮಂ ಮಾಡಿ ಜಗಕ್ಕೆಲ್ಲ ತಾನೇ ದೇವರಾಗಿ ವಜ್ರಮಲೆಯಲ್ಲಿ ನೆಲೆಗೊಂಡು ಆಲಂಬಾಡಿ, ಜುಂಜೇಗೌಡನಿಂದ ಒಂದು ಅಂಕಣ ನಿವೇಶನ ಕಟ್ಟಿಸಿಕೊಂಡು, ಭೂಸುರನಾದ ಬೇಡರ ಖಣ್ಣಯ್ಯನಿಂದ ಪೂಜಿಸಿಕೊಂಡು, ಬ್ಯಾಡರ ಕಣ್ಣಯ್ಯನ ದೃಡಕ್ಕೆ ಮೆಚ್ಚಿ ಅವನಿಗೆ ಮೋಕ್ಷಕೊಟ್ಟು, ಗುಂದಿಪ್ಪೆ ನಗರ ಸೀಮೆಯಲ್ಲಿಯಿದ್ದಂತಹ ಬ್ಯಾಡ ಕಂಪಣದ ರಾಯಣ್ಣನಾಯ್ಕನ ಮನೆಯಲ್ಲಿ ಕೊಂಗದೊರೆ ಹೆಣ್ಣು ಕೇಳಿದ್ದರಿಂದ ಅವರು ಯಾರು ಕಾಣದ ಹಾಗೆ ಬರುತಾ ಇರಲು ದಾರಿಯಲ್ಲಿ ತುಂಗಭದ್ರ ನದಿ ದಾಟಲಾರದೆ ಶ್ರೀಮಹದೇಶ್ವರನನ್ನು ಭಜಿಸಲು ನದಿ ಇಬ್ಭಾಗವಾಗಿ ದಾರಿ ಬಿಟ್ಟಿತು. ಅವರು ತಮ್ಮಲ್ಲಿ ಶಿಶು ಹುಟ್ಟಿದರೆ ಭದ್ರಾಭದ್ರಿ ಎಂದು

ನಾಮದೇಹವಿಡುತ್ತೇವೆಂದು ನಿಶ್ಚೈಸಿ ಆ ನದಿ ದಾಟಿ ಬಂದು ಕತ್ತಲೆ ರಾಜ್ಯದಲ್ಲಿ ಸ್ಥಳವಾಗಿ ಇರಲು ಬಾಳಲ್ಲಿ ಸಿಂಹಾಸನ ಕುಂತೂರು ಮಠದ ಸ್ವಾಮಿಯವರು ಬಂದು ಬೇಡಗಂಪಣಕ್ಕೆ ಲಿಂಗಧಾರಣೆ ಮಾಡಿ, ರಾಯಣ್ಣನಾಯಕನನ್ನು ಓಕುಳಿ ಸೇವೆಗೆ ಕರ್ತನ ಮಾಡಿ ಈ ಮಾದೇಶ್ವರನು ಸರಗೂರಿನಲ್ಲಿ ಇರುವ ಉಪ್ಪಲಿಗಶೆಟ್ಟಿಗೆ ವಲಿದು ಗುಡ್ಡನಮಾಡಿ ಎಣ್ಣೆಮಜ್ಜನ ಶ್ಯಾವೆಗೆ ಕರ್ತನ ಮಾಡಿಯಿರಲು ಈ ಮದನಾರಿಯಿಂದ ವಿಸ್ತಾರವಾಗಿ ದೇವಸ್ಥಾನ ಉದ್ಧರಿಸಲು ಇದಕ್ಕೆ ಪೂಜಾಕರ್ತರು ಕಾಡುವೀರ ತಂಬಡಿ ಮಕ್ಕಳು ಪೂಜಾ ವಿರುದ್ಧ ಮಾಡಿಕೊಂಡು ಓರಿಯಾದಿಗೆ ಬರಲು ಇದಕ್ಕಾಗಿ ಓರಿಯಾದಿಗೆ ಎದುರಾಳಿಯಾದ ಯೀ ಹುಡುಗರ ಮಾವನಿಗೆ ಮೊಣ್ಣೆಪಾಲಿನ ಶಿವಾಗದ ಶ್ಯಾವೆಗೆ ನೇಮಿಸಿ, ಈ ಹುಡುಗರ ಪೂಜಾಕರ್ತರ ಮಾಡಿ ಇವರು ಉತ್ತ ಭೂಮಿಗೆ ತೆರಿಗೆಯಿಲ್ಲದಾಗ್ಯೂ ಪಟಗಾರನಾದ ರಾಯಣ್ಣ ನಾಯಕನಿಗೆ ಬಿಳಿ ಛತ್ರಿ, ಪಚ್ಚೆಮಡಿ ತೋಡಾಬಳೆ ಶಾಲು ನಾಮೆ ಸಹಕೊಟ್ಟು ಯಿ ಕಂಪಣಕ್ಕೆ ಕರ್ತನೆಂದು ನೀನು ಜಾತಿಪದ್ಧತಿ ಪ್ರಕಾರ ಅನಾಚಾರಸ್ತನ ಶಿಕ್ಷಿಸಬಹುದೆಂದು ನೇಮಿಸಿದ್ದಕ್ಕೆ ಉಂಟಾದ ತಾಮ್ರದ ಶಾಸನ ಶ್ರೀ ಮಹಾದೇವನಾದ ಮಹದೇಶ್ವರಸ್ವಾಮಿ, ಸಿದ್ದೇಶ್ವರ, ಬ್ರಹ್ಮೇಶ್ವರ, ಶಿವಲಿಂಕಾರೇಶ್ವರ, ಹಿರಿಮಡಿವಾಳದೇವರು ಪಂಚ ದೇವಸ್ಥಾನಕರ್ತ ಶ್ರೀ ಮಹದೇವ, ಪಂಚ ಮಠಕ್ಕೆ ಕರ್ತ ಕುಂತೂರು ಮಠ ಇದಕ್ಕೆಲ್ಲ ಪಟಗಾರ ರಾಯಣ್ಣನಾಯಕನು ಕರ್ತನೆಂದು ನಿಶ್ಚೈಸಿತು.

॥ ಶ್ರೀ ಗುರುವೇನಮಃ ॥

ಲಿಂಗರಾಜ ಅರಸಿನವರ ಕೈ ಬರಹಾ

ಮ ಶ್ರೀ ಶ್ರೀ ರ ಓದಣ್ಣ ಃ ಶಿದ್ರಸ್ರೀ ಓದಣ್ಣ

ಬೇವಿಸ್ರಿ ಓದಣ್ಣ । ನೆಲ್ಲೂರು ಅಯ್ಯ ಓದಣ್ಣ

ಮಡಿವಾಳ ಅಯ್ಯ ಓದಣ್ಣ.

ಈ ಮೇಲಿನ ಎರಡು ತಾಮ್ರ ಶಾಸನಗಳನ್ನು ಅವಲೋಕಿಸಿ ನೋಡಿದಾಗ, ಅನೇಕ ವಿಷಯಗಳು ನಮಗೆ ತಿಳಿದು ಬರುವುದರಿಂದ ಇದು ಒಂದು ಪ್ರಮುಖವಾದ ಆಧಾರವಾಗಿರುವುದು ಕಂಡು ಬರುತ್ತದೆ. ಈ ಶಾಸನಗಳ ಬಗ್ಗೆ ವಿವರಣೆಯನ್ನು ಸಿ. ನಾಗರಾಜುರವರಿಂದ ರಚಿತವಾದ "ಶ್ರೀ ಮಲೆ ಮಹದೇಶ್ವರ ಕ್ಷೇತ್ರ" ಎಂಬ ಪುಸ್ತಕದಲ್ಲಿ ನೋಡಬಹುದಾಗಿದೆ.

(ಮುಂದುವರಿಯುವುದು)

ಜಗದೊಡೆಯ ಮಹದೇವ

ಎಲ್ಲೆಡೆ ನೋಡಿದರೂ ಮಹದೇವ ನಿಹನು
ಅವನಿಲ್ಲದ ಸ್ಥಳವುಂಬೆ ಜಗದಲಿ
ಭಕ್ತಬಂಧುಗಳ ಹರಸುತನಿಹನು. ॥

ಮಾಯೆ ಸ್ವರೂಪನೆ ಮಲೆ ಮಹದೇವನೆ
ಎಲ್ಲರ ಹೃದಯದಿ ನಿಂದವನೆ,
ಸಕಲ ಜೀವಿಗಳ ಮನದಲಿ ನೆಲಸಿರುವೆ. ॥

ಓಂಕಾರ ರೂಪನೆ ಮಲೆ ಮಹದೇವನೆ
ಓ ಚಂದ್ರಧರನೆ ಜಂಗಮಭೂಷಿತನೆ
ಸಪ್ತಗಿರಿವಾಸನೆ ವಿಭೂತಿ ಪುರುಷನೆ. ॥

–ಟಿ.ಎಂ. ಸ್ವಾಮಿ,

ನಾಗಮಲೆಯಲ್ಲಿ ಮಹದೇಶ್ವರರು ನೆಲೆಯಾದ ಕಥೆ

–ಶ್ರೀ ಡಿ. ರುದ್ರಪ್ಪ

ಮಲೆ ಮಲೆ ಮಾತಾಡಿ ಹುಲಿ ಕರಡಿ ಜೂಜಾಡಿ
ಕೆಡದಿದ್ದ ಹುಲಿ ಕಲ್ಲಾಗಿ : ಮಾದೇವ,
ಅಲ್ಲೊಂದು ಕಾಳಿಂಗ ಮರೆಯಾಯ್ತು : ಮಾದಪ್ಪ
ನಿಮ್ಮಾಯ ಒಬ್ಬರಿಗು ತಿಳಿಯಾದು ।

ಮಲೆಯ ಮಾದಪ್ಪ ಬರುವ ಚಂದವೋ । ನೋಡೇ ನಮ್ಮ ಶಿವನಾ ॥
ಹರಹರಾ ಶಿವ ಶಿವಾ : ನಮ್ಮಪ್ಪಾಜಿ ಮಾಯಾಕಾರ ಮಾದೇವ ।
ಉರಿಗದ್ದೆ ಪರುಂಚಂದ್ರಸಾಲೆಯಲ್ಲಿ ಕುಂತಿದ್ರಲ್ಲ.
ದೇವ್ಕೊ ದೇವುಮಾನ್ರೆಲ್ಲಾ ಪೂಜೆ ಪುನಸ್ಕಾರವನ್ನು ಮಾಡಿದ್ದಾರೆಯೆಂದಾಗಿ
ಮಾರಿ ಮಸಣಿ ದುರ್ಗಿ ಚೌಡಿರೆಲ್ಲಾ ಬಂದು
ನಮ್ಮಪ್ಪಾಜಿಯವರ ಪಾದಕ್ಕೆ ಶರಣ ಮಾಡಿಆಹಾರ ಕೇಳಿದ್ರಂತೆ.
"ಆಹಾ ಕಂದಗಳಾ, ನಿಮ್ಗೆ ಆಹಾರವನ್ನು ಕೊಟ್ಬಿಟ್ರೇ ಬಂದಂತಹ
ಪರ್ಸೆನೆಲ್ಲ ಹೊಟ್ಟುದುರುಸ್ದೆಂಗ ಉದುರುಸ್ಬುಡ್ತೀನಿ ಆ ಕಾರಣ
ಆಹಾರ ಕೋಡೊಲ್ಲಾ ಹೊರಡಿ ಅಂತಾರೆ. ಮಾದೇವ ನೋಡೇ ನಮ್ಮ ಶಿವನಾ.

ಒಬ್ಬ ಮಾರಿ–ಅಣ್ಣಯ್ಯ ಅಂಗಾದ್ರೆ ನಮ್ಮ ಗತಿ ಏನು ? ಒಂದ್ಸಿವಕಾದ್ರು
ಆಹಾರ ಕೊಡಬೇಕು ಅಂದ್ಲು. "ಕೇಳಲಾ ನನ್ನ ಕಂದಾ ಮಾರಮ್ಮ
ನಿಮಗೆ ನರ ಮಾನವರ ಆಹಾರ ಮಾತ್ರ ಕೊಡೋಕ್ಕೆಲ್ಲಾ ಬ್ಯಾರೆ ಆಹಾರ
ನಿಮಗೆ ದೊರಕ್ತುತ್ತೆ, ನೀವು ಬ್ಯಾರೆ ಬ್ಯಾರೆ ಊರಲ್ಲಿ ನೆಲೆಯಾಗಿ ಹೆಸರುವಾಸಿ
ಯನ್ನು ಪಡ್ಕೊಂಡು ಸುಖವಾಗಿರಿ. ಒಂದೇ ಒಂದು ದಿವ್ಸ ನಿಮ್ಗೆ ಆಹಾರ
ಕೊಟ್ಬಿದ್ದೀನಿ, ನೀವು ನೆಲಗೊಂಡ ಊರಿಗೆ ಗ್ರಾಮದೇವತೆಯಾಗಿ ಅಂತಾ
ಸ್ಯಾಪ ಕೊಟ್ಬವರೇ ಮಾಯಕಾರ ಮಾದೇವ, ನೋಡೆ ನಮ್ಮ ಶಿವನಾ

ನಮ್ಮಪ್ಪಾಜಿ ಮಹದೇಶ್ವರ, ಮಾಯಕಾರ
ಆಹಾ ಹೆಣ್ಣೇಳುಕೋಟಿ, ಗಂಡೇಳುಕೋಟಿ,
ಪರ್ವ ನನ್ನೇಳುಮಲೆ ಕೈಲಾಸಕ್ಕೆ ಬರ್ತಾರೆ
ನಾನು ಹೆಣ್ಣಾರಿ ಮಕ್ಕವನ್ನು ನೋಡಬಾರದು
ಅಂತೇಳಿ ಕಾರಯ್ಯ ಬಿಲ್ಲಯ್ಯ ಕನ್ನಯ್ಯಗಳನ್ನು ಕರೆದು
ಅಯ್ಯೋ ನನ್ನ ಕಂದಗಳೇ.....
ನಾನು ನಾಗಮಲೇಲಿ ನೆಲೆಗೊಳ್ಳುತ್ತಿದ್ದಿನ್ರಪ್ಪ
ನೀವು ಬಂದಂತ ಪರ್ವ ಕೈಲಿ ಪೂಜೆ
ಪುರಸ್ಕಾರ ಮಾಡಿಸಿಕೊಂಡು ಅವರ ಧರ್ಮ ಕರ್ಮವನ್ನು ನೋಡಿ ತಿಳಿದು
ಅವರು ಕೇಳಿದಂತಹ ವರವನ್ನು ಕೊಟ್ಟುಕೊಂಡು ನೀವು
ಸಾಲೂರು ಮಠದಲ್ಲಿ ಇದ್ದುಕೊಂಡು ಸುಖವಾಗಿರ್ರಪ್ಪ
ತಿಂಗ್ಳು ತಿಂಗ್ಳು ಸಾವ್ಗ ಸರಗೂರಪ್ಪ ಬತ್ತನೆ
ಸರಣೆ ರಾಮವ್ವ ಬತ್ತಳೆ : ಕಂದಗಳ
ನಿಮ್ಮ ಕಷ್ಟ ಸುಖನ್ನೆಲ್ಲ ಅವ್ರೆ ನೋಡುತ್ತಾರೆ,
ಆದ್ರೂ ನಿಮ್ಮಗೆ ನನ್ನ ನೋಡಬೇಕು ಅಂದಾಗ
ನನ್ನ ಕೂಗಿ ಕರೆದ್ರೆ ನಾನು ಬತ್ತೀನ್ರಪ್ಪ
ಅಂತ ಬುದ್ದವಾದವನ್ನು ಹೇಳುಬಿಟ್ಟು
ನಮ್ಮಪ್ಪಾಜಿ ಸ್ವಾಮಿ ಏಳ್ಮಲೆ ಮಾದೇಶ್ವರ
ಮಾಯ್ದಿಂದ ನಾಗುಮಲೆ ಕಲ್ಲಲ್ಲಿ
ಗುರುವೇ ನಲಿದು ನ್ಯಾಂಟ್ಯ ವಾಡಿದರು
ಸಾವಿರ ತಲೆಯ ಸರ್ಪನ ನೆರಳಲ್ಲಿ
ಏಕದಲಿ ತಾನೊರಗಿದರು.

ಆತ್ಮ – ಪರಮಾತ್ಮ

ಸುತ್ತಲೂ ಕರಿಮುಗಿಲು
ಎತ್ತೆತ್ತಲೂ ಬರಿ ಕತ್ತಲು ।
ನಾಹೇಗೆ ಕಾಣಲಯ್ಯ ।
ನಿನ್ನ ಪಾದವ । ಓ ಮಾದೇವ ॥

ಜೀವನ ಭಾರದಿ, ಬಳಲಿದೆ ಜೀವ
ತಾಳದು ತನುವು, ಇನ್ನೂ ನೋವ ।
ಕೈ ಹಿಡಿದು । ಕಾಪಾಡೊ ಮಾದೇವ ॥

ಸಿರಿಬೇಡ, ಸಂಪದ ಬೇಡ,
ಹಿರಿದಪ್ಪ ಪದವಿಬೇಡ
ಹಿಡಿಯಷ್ಟು ನೆಮ್ಮದಿ ನೀ ನೀಡೋ ॥

ದೇವ । ಮಾದೇವ । ಕಾಪಾಡು ಪರಮಾತ್ಮ
ಈ ಜೀವ ಸಾವಕಂಡು; ಬೆರೆಯಲಿ ನಿನ್ನಲಿ ನನಾತ್ಮ ॥